ಓ.ಎಸ್. ನಂ. 21/2014

ಪಿ.ಡಬ್ಲ್ಯು: 01 (ಶರಣಕುಮಾರ್)

ದಿನಾಂಕಃ 25.01.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ – ಶ್ರೀ AVK ವಕೀಲರಿಂದ.

ದಾವಾ ಆಸ್ತಿ ಮೂಲತಃ ನನ್ನ ತಂದೆಯ ತಂದೆಯ ಆಸ್ತಿಯಾಗಿರುತ್ತದೆ. ಅದು ನನ್ನ ತಾತನಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ನನ್ನ ತಾತನಾದ ಸಿದ್ದಪ್ಪನ ತಂದೆಯ ಹೆಸರು ನನಗೆ ಗೊತ್ತಿಲ್ಲ. ಸಿದ್ದಪ್ಪನ ತಂದೆಯ ಹೆಸರು ಬಸಪ್ಪ ಎಂದರೆ ನನಗೆ ಗೊತ್ತಿಲ್ಲ. ಸಿದ್ದಪ್ಪನ ಒಡಹುಟ್ಟಿದವರ ಬಗ್ಗೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 92, 92/1-4 ಎಂದು ಉಪವಿಭಾಗ ಆಗಿದೆ ಎಂದರೆ ಇಲ್ಲ. ದಿಃ 26.07.1973 ರಂದು 1,500/- ರೂ.ಗೆ ಸಿದ್ದಪ್ಪನ ಮಕ್ಕಳಿಂದ 6 ನೇ ಪ್ರತಿವಾದಿಯ ತಂದೆ ಸರ್ವೆ ನಂಬರ್ 92 ರಲ್ಲಿ 7.17 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಇಲ್ಲ. ಅದನ್ನು ಸಿದ್ದಪ್ಪನ ಮಕ್ಕಳು ಕುಟುಂಬದ ನಿರ್ವಹಣೆ ಮಾರಾಟ ಮಾಡಿರುತ್ತಾರೆ ಎಂದರೆ ಇಲ್ಲ. ಅದಕ್ಕೆ ನನ್ನ ತಂದೆಯವರು ಸಾಕ್ಷಿ ಸಹಿಯನ್ನು ಕ್ರಯ ಪತ್ರಕ್ಕೆ ಹಾಕಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಮೀನಿನ ಪೂರ್ವಕ್ಕೆ ಶಾಂತಮ್ಮನ ಹೊಲ, ಪಶ್ಚಿಮಕ್ಕೆ ಚನ್ನಪ್ಪನ ಹೊಲ, ಉತ್ತರಕ್ಕೆ ಬಸಯ್ಯರವರ ಹೊಲ, ದಕ್ಷಿಣಕ್ಕೆ ಚನ್ನಬಸಪ್ಪನ ಭಾಗಕ್ಕೆ ಬಂದ ಹೊಲ ಇದೆ ಎಂದರೆ ಸುಳ್ಳು. ಸದರಿ 7.17 ಎಕರೆ ರಲ್ಲಿ 5 ಎಕರೆ ಜಮೀನನ್ನು ದಿಃ 22.08.1983 ರಂದು 3 ನೇ ಪ್ರತಿವಾದಿಗೆ 6 ನೇ ಪ್ರತಿವಾದಿಯ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸುಳ್ಳು. ಅಂದಿನಿಂದ 3 ನೇ ಪ್ರತಿವಾದಿಯೇ ಸದರಿ 5 ಎಕರೆಯ ಸ್ವಾಧೀನದಲ್ಲಿದ್ದಾರೆ ಎಂದರೆ ಸುಳ್ಳು.

ದಿಃ 22.08.1983 ಮತ್ತು 26.07.1973 ರ ಕ್ರಯ ಪತ್ರವನ್ನು ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ನನ್ನ ತಂದೆ ಪ್ರಶ್ನಿಸಿರಬಹುದು. 3 ನೇ ಪ್ರತಿವಾದಿಯ ಹೆಸರಿಗೆ ಇರುವ ಪಹಣಿ ಪತ್ರಿಕೆಯನ್ನು ನಾನು ಪ್ರಶ್ನಿಸಿರುವುದಿಲ್ಲ ಎಂದರೆ ಹೌದು. ಸಾಕ್ಷಿ ಮುಂದುವರೆದು ನನ್ನ ತಂದೆ ಪ್ರಶ್ನಿಸಿರಬಹುದು. ನಾನು ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ನಾನೇ ಮಾಹಿತಿಯನ್ನು ನೀಡಿರುತ್ತೇನೆ. ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತಿದೆ. ದಾವಾ ಸ್ವತ್ತುಗಳು ಕುಟುಂಬದ ಆಸ್ತಿಗಳಲ್ಲ ಅದನ್ನು ಈಗಾಗಲೇ ಮಾರಾಟ ಮಾಡಲಾಗಿದೆ ಎಂದರೆ ಕುಟುಂಬದ ಆಸ್ತಿಯಾಗಿರುತ್ತದೆ. 6 ನೇ ಪ್ರತಿವಾದಿಯ ಬಗ್ಗೆ ವಾದ ಪತ್ರದಲ್ಲಿ ಬರೆಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಇದರ ಬಗ್ಗೆ ಹೆಚ್ಚಾಗಿ ಮಾಹಿತಿ ನನ್ನ ತಂದೆಗೆ ಗೊತ್ತು. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ಹಕ್ಕು ಇಲ್ಲದೆ ಇದ್ದರು ಆಸ್ತಿಯನ್ನು ಹೊಡೆಯುವ ಕಾರಣಕ್ಕೆ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ. 6 ನೇ ಪ್ರತಿವಾದಿಗೆ ಸೇರಿದ 2.17 ಎಕರೆಗೆ 6 ನೇ ಪ್ರತಿವಾದಿಯೇ ಮಾಲೀಕರಾಗಿದ್ದು, ಅವರೇ ಸ್ವಾಧೀನದಲ್ಲಿದ್ದಾರೆ ಎಂದರೆ ಸರಿಯಲ್ಲ.

ಪಾಟೀ ಸವಾಲು ಮುಕ್ತಾಯ.

ಮರು ವಿಚಾರಣೆ ಇಲ್ಲ.

(ಮೇಲ್ಕಂಡ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ., ಕೂಡ್ಲಿಗಿ.